ಅನುಬಂಧ – 2

ಕ್ರ.ಸಂ.	ಮಹಾನಗರಪಾಲಿಕೆಗಳು	ಮಂಜೂರಾದ ಪೌರ ಕಾರ್ಮಿಕರ ಹುದ್ದೆಗಳು	ಹಾಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರು	ಖಾಲಿ ಹುದ್ದೆಗಳು
1	2	3	4	5
1.	ಹುಬ್ಬಳ್ಳಿ–ಧಾರವಾಡ	1252	971	281
2.	ಮೈಸೂರು	1081	876	205
3.	ಗುಲ್ಬರ್ಗಾ	401	296	105
4.	ಮಂಗಳೂರು	391	298	93
5.	ಬೆಳಗಾವಿ	661	2875	911
	ಒಟ್ಟು	**3786**	**2875**	**911**

ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ

2553(3412) ಶ್ರೀ ಬಚ್ಚೇಗೌಡ ಬಿ.ಎನ್. (ಹೊಸಕೋಟೆ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಜಲ ವಿದ್ಯುತ್ ಮತ್ತು ಥರ್ಮಲ್ ವಿದ್ಯುತ್ ಮೂಲಕ ಎಷ್ಟು ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯಾಗುತ್ತಿದೆ; (ವಿವರ ನೀಡುವುದು);

ಆ) ಜಲ ವಿದ್ಯುತ್ ಉತ್ಪಾದನಾ ಪ್ರದೇಶಗಳಾವುವು; ಅವುಗಳಲ್ಲಿರುವ ಪ್ರಸ್ತುತ ನೀರಿನ ಪ್ರಮಾಣ ಎಷ್ಟು; (ವಿವರ ನೀಡುವುದು);

ಇ) ರಾಷ್ಟ್ರೀಯ ಗ್ರಿಡ್‌ನ ಮೂಲಗಳಿಂದ ಕರ್ನಾಟಕಕ್ಕೆ ಎಷ್ಟು ಮೆಗಾವ್ಯಾಟ್ ವಿದ್ಯುತ್ ಸರಬರಾಜಾಗುತ್ತಿದೆ; (ವಿವರ ನೀಡುವುದು);

ಈ) ರಾಜ್ಯದ ರೈತರಿಗೆ ಕೃಷಿ ಚಟುವಟಿಕೆಗಳಿಗಾಗಿ ದಿನಕ್ಕೆ 3 ಫೇಸ್‌ನಲ್ಲಿ ನೀಡಲಾಗುತ್ತಿರುವ ವಿದ್ಯುತ್ ಸರಬರಾಜು ಸಮಯವೆಷ್ಟು ಮತ್ತು ವಿದ್ಯುತ್ ಪ್ರಮಾಣವೆಷ್ಟು;

ಉ) ರಾಜ್ಯದಲ್ಲಿನ ಸಣ್ಣ ಕೈಗಾರಿಕೆಗಳಿಗೆ ಸರಬರಾಜಾಗುತ್ತಿರುವ ವಿದ್ಯುತ್ ಪ್ರಮಾಣವೆಷ್ಟು; ಸಮಯ ನಿಗಧಿ ಪಡಿಸಲಾಗಿದೆಯೇ; (ವಿವರ ನೀಡುವುದು);

ಊ) ರಾಜ್ಯದಲ್ಲಿನ ಭಾರಿ ಕೈಗಾರಿಕೆಗಳಿಗೆ ನೀಡುವ ವಿದ್ಯುತ್ ಪ್ರಮಾಣವೆಷ್ಟು; ಸಮಯ ಕಡಿತಗೊಳಿಸಲಾಗಿದೆಯೇ; (ವಿವರ ನೀಡುವುದು);

ಶ್ರೀ ಬಸವರಾಜ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ರಾಜ್ಯದಲ್ಲಿ ಜಲ ವಿದ್ಯುತ್ ಮತ್ತು ಥರ್ಮಲ್ ವಿದ್ಯುತ್ ಮೂಲಕ ಒಟ್ಟು 4,713.72 ಮೆಗಾ ವ್ಯಾಟ್ ನಷ್ಟು ವಿದ್ಯುತ್ ಉತ್ಪಾದನೆಯಾಗುತ್ತಿರುತ್ತದೆ. ವಿವರ ಈ ಕೆಳಕಂಡಂತಿರುತ್ತದೆ.

1) ಜಲ ವಿದ್ಯುತ್ – 1597.92 ಮೆ.ವ್ಯಾ.

2) ಥರ್ಮಲ್ ವಿದ್ಯುತ್ – 3115.80 ಮೆ.ವ್ಯಾ.

ಆ) ರಾಜ್ಯದಲ್ಲಿರುವ ಜಲ ವಿದ್ಯುತ್ ಉತ್ಪಾದನಾ ಕೇಂದ್ರಗಳು ಈ ಕೆಳಕಂಡಂತಿದೆ.

1) ನಾಗಝರಿ, 2) ಸೂಪ, 3) ಕೊಡಸಳ್ಳಿ, 4) ಕದ್ರಾ, 5) ವರಾಹಿ, 6) ಮಾಣಿ, 7) ಶರಾವತಿ, 8) ಲಿಂಗನಮಕ್ಕಿ, 9) ಜೋಗ, 10) ಗೇರುಸೊಪ್ಪ, 11) ಶಿವ 12) ಶಿಂಷಾ, 13) ಘಟಪ್ರಭಾ, 14) ಮುನಿರಾಬಾದ್ ಮತ್ತು ಟಿ.ಬಿ. ಬೋರ್ಡ್ (ರಾಜ್ಯದ ಪಾಲು), 15) ಭದ್ರಾ.

ದಿನಾಂಕ: 11–07–2003 ರಲ್ಲಿದ್ದಂತೆ ಪ್ರಮುಖ ಜಲ ವಿದ್ಯುತ್ ಉತ್ಪಾದನಾ ಕೇಂದ್ರಗಳ ಜಲಾಶಯಗಳ ನೀರಿನ ಪ್ರಮಾಣ ಕೆಳಕಂಡಂತಿದೆ.

1	ಲಿಂಗನಮಕ್ಕಿ	27.22 ಟಿ.ಎಂ.ಸಿ. (1759.60 ಅಡಿಗಳು)
2	ಸೂಪ	19.00 ಟಿ.ಎಂ.ಸಿ. (518.80 ಮೀಟರ್‌ಗಳು)
3	ಮಾಣಿ	4.70 ಟಿ.ಎಂ.ಸಿ. (574.00 ಮೀಟರ್‌ಗಳು)

ಇ) ರಾಷ್ಟ್ರೀಯ ಗ್ರಿಡ್ ಮೂಲಗಳಿಂದ ಕರ್ನಾಟಕಕ್ಕೆ ಒಟ್ಟು 920 ಮೆಗಾ ವ್ಯಾಟ್ ವಿದ್ಯುತ್ ಸರಬರಾಜಾಗುತ್ತಿದೆ. ಅವುಗಳ ವಿವರ ಈ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ರಾಷ್ಟ್ರೀಯ ಗ್ರಿಡ್‌ನ ಉತ್ಪಾದನಾ ಕೇಂದ್ರಗಳು	ಸರಬರಾಜಾಗುತ್ತಿರುವ ವಿದ್ಯುತ್ ಮೆಗಾ ವ್ಯಾಟ್‌ಗಳಲ್ಲಿ
1	2	3
1.	ರಾಮಗುಂಡಂ ಶಾಖೋತ್ಪನ್ನ	345
2.	ನೈವೇಲಿ 1ನೇ ಸ್ಟೇಜ್	84
3.	ನೈವೇಲಿ 2ನೇ ಸ್ಟೇಜ್	115
4.	ನೈವೇಲಿ 1ನೇ ಸ್ಟೇಜ್ (ವಿಸ್ತರಣೆ)	100
5.	ಕೈಗಾ ಅಣು ವಿದ್ಯುತ್ ಕೇಂದ್ರ	108
6.	ಕಲ್ಪಕಂ ಅಣು ವಿದ್ಯುತ್ ಕೇಂದ್ರ	8
7.	ತಾಲ್ಚೇರ್ 2ನೇ ಸ್ಟೇಜ್ ಶಾಖೋತ್ಪನ್ನ ವಿದ್ಯುತ್ ಕೇಂದ್ರ	100
8.	ಪೂರ್ವ ವಲಯ ಎನ್.ಟಿ.ಪಿ.ಸಿ. ಶಾಖೋತ್ಪನ್ನ ಕೇಂದ್ರ	60
	ಒಟ್ಟು	**920**

ಈ) ಕರ್ನಾಟಕ ರಾಜ್ಯಾದ್ಯಂತ ದಿನಾಂಕ 19–6–2003 ರಿಂದ ನೀರಾವರಿ ಪಂಪುಸೆಟ್ಟುಗಳಿಗೆ ಮೂರು ಫೇಸ್ ವಿದ್ಯುತ್ತನ್ನು ದಿನವಹಿ ಸರಾಸರಿ 9 1/2 ಗಂಟೆವರೆಗೆ ಸರಬರಾಜು ಮಾಡಲಾಗುತ್ತಿದೆ. ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು 2003ರ ಟ್ಯಾರಿಫ್ ಆದೇಶದಲ್ಲಿ ಪ್ರತಿಯೊಂದು ವಿದ್ಯುತ್ ವಿತರಣಾ ಕಂಪನಿಗೆ ಪ್ರತಿ ನೀರಾವರಿ ಪಂಪುಸೆಟ್ಟಿಗೆ ಸೂಚಿಸಿರುವ ಸರಾಸರಿ ವಿದ್ಯುತ್ ಬಳಕೆಯ ಪ್ರಮಾಣದ ಪ್ರಕಾರ, ದಿನವಹಿ ಸರಾಸರಿ ವಿದ್ಯುತ್ತಿನ ಪ್ರಮಾಣ ಸುಮಾರು 22.9 ದಶಲಕ್ಷ ಯೂನಿಟ್‌ಗಳು.

ಉ) ರಾಜ್ಯದಲ್ಲಿನ ಸಣ್ಣ ಕೈಗಾರಿಕೆಗಳಿಗೆ ಸರಬರಾಜಾಗುತ್ತಿರುವ ಮಾಸಿಕ ಒಟ್ಟು ವಿದ್ಯುತ್ತಿನ ಪ್ರಮಾಣ 176.559 ಮಿಲಿಯನ್ ಯೂನಿಟ್‌ಗಳು. ಸಣ್ಣ ಕೈಗಾರಿಕೆಗಳಿಗೆ ವಿದ್ಯುತ್ ಪೂರೈಕೆಯ ಸಮಯವನ್ನು ನಿಗದಿಪಡಿಸಿಲ್ಲ. ಆದಾಗ್ಯೂ ನಗರ ವಿದ್ಯುತ್ ಮಾರ್ಗಗಳ ಮೇಲೆ ಬರುವ ಕೈಗಾರಿಕೆಗಳಿಗೆ

ಅನಿರ್ಬಂಧಿತ ವಿದ್ಯುತ್ ಪೂರೈಕೆಯಾಗುತ್ತಿದ್ದು, ಗ್ರಾಮೀಣ ವಿದ್ಯುತ್ ಮಾರ್ಗಗಳ ಮೇಲೆ ಬರುವ ಸಣ್ಣ ಕೈಗಾರಿಕೆಗಳಿಗೆ ನಿಗದಿಪಡಿಸಿದ ಅವಧಿಯಲ್ಲಿ ಮೂರು ಫೇಸ್ ವಿದ್ಯುತ್ ಪೂರೈಕೆಯಾಗುತ್ತಿದೆ.

ಊ) ರಾಜ್ಯದಲ್ಲಿನ ಭಾರಿ ಕೈಗಾರಿಕೆಗಳಿಗೆ ಮಾಸಿಕ ಒಟ್ಟು 296.65 ಮಿಲಿಯನ್ ಯೂನಿಟ್‌ಗಳ ವಿದ್ಯುತ್ ಪೂರೈಕೆಯಾಗುತ್ತಿದೆ.

ಭಾರಿ ಕೈಗಾರಿಕೆಗಳಿಗೆ ಸಾಮಾನ್ಯವಾಗಿ ವಿದ್ಯುತ್ ಸರಬರಾಜಿನ ಸಮಯವನ್ನು ಕಡಿತಗೊಳಿಸಿಲ್ಲ. ಅಲ್ಲದೇ, ನಗರ ವಿದ್ಯುತ್ ಮಾರ್ಗಗಳ ಮೇಲೆ ಬರುವ ಕೈಗಾರಿಕೆಗಳಿಗೆ ಮತ್ತು ಕೈಗಾರಿಕೆಗಳಿಗಾಗಿಯೇ ಪ್ರತ್ಯೇಕವಾದ ವಿದ್ಯುತ್ ಮಾರ್ಗಗಳ ಮೂಲಕ ವಿದ್ಯುತ್ ಸರಬರಾಜಾಗುವ ಕೈಗಾರಿಕೆಗಳಿಗೆ ಅನಿರ್ಬಂಧಿತ ವಿದ್ಯುತ್ ಪೂರೈಕೆಯಾಗುತ್ತಿದೆ. ಗ್ರಾಮೀಣ ವಿದ್ಯುತ್ ಮಾರ್ಗಗಳ ಮೇಲೆ ಬರುವ ಕೆಲವು ಭಾರಿ ಕೈಗಾರಿಕೆಗಳಿಗೆ ನಿಗದಿಪಡಿಸಿದ ಅವಧಿಯಲ್ಲಿ ಮೂರು ಫೇಸ್ ವಿದ್ಯುತ್ ಪೂರೈಕೆಯಾಗುತ್ತಿದೆ.

ಬೆಂಗಳೂರು ನಗರದಲ್ಲಿ ಮೆಟ್ರೋ ರೈಲು ಸೌಲಭ್ಯ ಕಲ್ಪಿಸುವುದು

2554(3413) ಶ್ರೀ ಬಚ್ಚೇಗೌಡ ಬಿ.ಎನ್. (ಹೊಸಕೋಟೆ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರಿನಲ್ಲಿ ಮೆಟ್ರೋ ರೈಲು ಸೌಲಭ್ಯ ಕಲ್ಪಿಸಲು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ;

ಆ) ಮೆಟ್ರೋ ರೈಲು ಸಾರಿಗೆ ವ್ಯವಸ್ಥೆಯನ್ನು ಬೆಂಗಳೂರು ನಗರಕ್ಕೆ ತರಲು ಸರ್ಕಾರ ಕೈಗೊಳ್ಳಬೇಕಾದ ರೂಪರೇಷೆಗಳೇನು;

ಇ) ಈ ಬಗ್ಗೆ ಹಣಕಾಸು ಪೂರೈಕೆ ಹಾಗೂ ಇತರೆ ಕಾರ್ಯಕ್ರಮ, ಕೈಗೊಳ್ಳಲು ಸಮಿತಿಗಳೇನ್ನಾದರೂ ರಚಿಸಲಾಗಿದೆಯೇ;

ಈ) ಈ ಯೋಜನೆಗೆ ವೆಚ್ಚ ಮಾಡುವ ಒಟ್ಟು ಅಂದಾಜು ಎಷ್ಟು ಹಾಗೂ ಎಷ್ಟು ಹಂತಗಳಲ್ಲಿ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಲಾಗುವುದು;

ಉ) ಈ ಯೋಜನೆಗೆ ಕೇಂದ್ರ ಮತ್ತು ರಾಜ್ಯಗಳ ಪಾಲೆಷ್ಟು;

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ಬೆಂಗಳೂರು ಮೆಟ್ರೋ ರೈಲು ಕಲ್ಪಿಸಲು ಸರ್ಕಾರ ತೀರ್ಮಾನಿಸಿದ್ದು, ಇದಕ್ಕೋಸ್ಕರ ಈಗಾಗಲೇ ವಿವರವಾದ ಯೋಜನಾ ವರದಿಯನ್ನು ಡೆಲ್ಲಿ ಮೆಟ್ರೋ ರೈಲು ಕಾರ್ಪೊರೇಷನ್‌ನಿಂದ ಪಡೆಯಲಾಗಿದೆ. ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಸಹಭಾಗಿತ್ವವನ್ನು ಪಡೆಯಲು ತಿಳುವಳಿಕೆ ಪತ್ರ (ಎಂ.ಓ.ಯು) ತಯಾರಿಸಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದು, ಅದರ ತೀರ್ಮಾನ ಕಾಯುತ್ತಿದೆ.

ಆ) ಕೇಂದ್ರ ಸರ್ಕಾರದ ಅನುಮತಿ ಪಡೆದ ಮೇಲೆ ಬೆಂಗಳೂರು ಮೆಟ್ರೋ ರೈಲು ಕಾರ್ಪೊರೇಷನ್‌ನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರದ ಸಹಭಾಗಿತ್ವದಲ್ಲಿ ಡೆಲ್ಲಿ ಮೆಟ್ರೋ ಮಾದರಿಯಲ್ಲಿ ಅನುಷ್ಠಾನಗೊಳಿಸಲಾಗುವುದು.

ಇ) ಹೌದು.

ಈ) ಯೋಜನಾ ವೆಚ್ಚ ರೂ. 4,989–00 ಕೋಟಿಗಳು ಎಂದು ಅಂದಾಜಿಸಲಾಗಿದ್ದು, ಈ ಯೋಜನೆಯನ್ನು ಈ ವರ್ಷದ ಅಂತ್ಯದಲ್ಲಿ ಆರಂಭಿಸಿ 5 ವರ್ಷದ ಅವಧಿಯಲ್ಲಿ ಪೂರ್ಣಗೊಳಿಸಲು